# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **199** |
| ಸದಸ್ಯರ ಹೆಸರು | : | **ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)** |
| ಉತ್ತರಿಸುವ ದಿನಾಂಕ | : | **13/09/2022** |
| ಉತ್ತರಿಸುವ ಸಚಿವರು | : | **ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು** |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಬೆಂಗಳೂರು ನಗರ ಜಿಲ್ಲೆಯಲ್ಲಿರುವ ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆಗಳ ಸಂಖ್ಯೆ ಎಷ್ಟು; ಅವುಗಳು ಯಾವುವು; (ಸಂಪೂರ್ಣ ವಿವರ ನೀಡುವುದು)</td><td>ಬೆಂಗಳೂರು ನಗರ ಜಿಲ್ಲೆಯಲ್ಲಿ 01 ಪಟ್ಟಣ ಪಂಚಾಯಿತಿ, 08 ಪುರಸಭೆಗಳು ಮತ್ತು 02 ನಗರಸಭೆಗಳು ಇರುತ್ತವೆ:
<table>
<tr><th>ಜಿಲ್ಲೆಯ ಹೆಸರು</th><th>ನಗರ ಸ್ಥಳೀಯ ಸಂಸ್ಥೆಯ ಹೆಸರು</th><th>ಪ.ಪಂ/ಪುರಸಭೆ/ ನಗರಸಭೆ</th></tr>
<tr><td rowspan="11">ಬೆಂಗಳೂರು ನಗರ</td><td>ದೊಡ್ಡತೋಗೂರು</td><td>ಪಟ್ಟಣ ಪಂಚಾಯಿತಿ</td></tr>
<tr><td>ಆನೇಕಲ್</td><td>ಪುರಸಭೆ</td></tr>
<tr><td>ಬೊಮ್ಮಸಂದ್ರ</td><td>ಪುರಸಭೆ</td></tr>
<tr><td>ಚಂದಾಪುರ</td><td>ಪುರಸಭೆ</td></tr>
<tr><td>ಅತ್ತೀಬೆಲೆ</td><td>ಪುರಸಭೆ</td></tr>
<tr><td>ಕೋನಪ್ಪನ ಅಗ್ರಹಾರ</td><td>ಪುರಸಭೆ</td></tr>
<tr><td>ಹುಣಸಮಾರನಹಳ್ಳಿ</td><td>ಪುರಸಭೆ</td></tr>
<tr><td>ಚಿಕ್ಕಬಾಣಾವರ</td><td>ಪುರಸಭೆ</td></tr>
<tr><td>ಹೆಬ್ಬಗೋಡಿ</td><td>ನಗರಸಭೆ</td></tr>
<tr><td>ಮಾದನಾಯಕನಹಳ್ಳಿ</td><td>ನಗರಸಭೆ</td></tr>
</table>
ಕೋನಪ್ಪನ ಅಗ್ರಹಾರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಿರುವ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠ ಇಲ್ಲಿ ತಡೆಯಾಜ್ಞೆ ಇರುತ್ತದೆ.<br><br>ದೊಡ್ಡತೋಗೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿರುವ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠ ಇಲ್ಲಿ ತಡೆಯಾಜ್ಞೆ ಇದ್ದು, ಪ್ರಸ್ತುತ, ಪ್ರಕರಣವು ಇತ್ಯರ್ಥಗೊಂಡಿದ್ದು, ಮುಂದಿನ ಕ್ರಮವಹಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.</td></tr>
</table>

| | | |
|---|---|---|
| ಆ | ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿ, ಪುರಸಭೆಗಳಾಗಿ ಮೇಲ್ದರ್ಜೆಗೆ ಏರಿಸಲು ಇರುವ ಮಾನದಂಡಗಳು ಯಾವುವು; ಯಾವ ಯಾವ ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಯನ್ನಾಗಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ-349 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ:<br>• ಗ್ರಾಮ ಪಂಚಾಯಿತಿ ಪ್ರದೇಶದ ಜನಸಂಖ್ಯೆಯು 10,000ಕ್ಕೆ ಕಡಿಮೆ ಇಲ್ಲದಂತೆ ಹಾಗೂ 20,000ಕ್ಕೆ ಹೆಚ್ಚಿಲ್ಲದಂತಿರಬೇಕು.<br>• ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚ.ಕಿ.ಮೀ ವಿಸ್ತೀರ್ಣಕ್ಕೆ 400 ಕ್ಕಿಂತ ಕಡಿಮೆ ಇಲ್ಲದಿರುವುದು.<br>• ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ 50% ಕ್ಕಿಂತ ಕಡಿಮೆ ಇಲ್ಲದಿರುವುದು.<br>• ದಿನಾಂಕ:19/03/2015 ರಂದು ನಡೆದ ಸಚಿವ ಸಂಪುಟ ಸಭೆಯ ನಿರ್ಣಯದಂತೆ, 2011 ರ ಜನಗಣತಿಯನುಸಾರ 15,000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ಗ್ರಾಮಪಂಚಾಯತಿಗಳನ್ನು ಮಾತ್ರ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಲು ಪರಿಗಣಿಸಲಾಗಿರುತ್ತದೆ.<br>• ಮೇಲ್ದರ್ಜೆಗೇರಿಸಲಾಗುವ ಪ್ರದೇಶದಲ್ಲಿ ತಾಲ್ಲೂಕು ಕೇಂದ್ರ ಕಾರ್ಯಸ್ಥಾನವು ಇದ್ದಲ್ಲಿ, ಆ ಪ್ರದೇಶವು 10000 ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದ್ದರೂ ಸಹ ಆ ಪ್ರದೇಶವನ್ನು ಪಟ್ಟಣ ಪಂಚಾಯಿತಿಯನ್ನಾಗಿ ಪರಿವರ್ತಿಸಲು ಅವಕಾಶವಿರುತ್ತದೆ.<br><br>ಗ್ರಾಮ ಪಂಚಾಯಿತಿಗಳನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಕಲಂ-3 ರನ್ವಯ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತದೆ:<br>• ಮೇಲ್ದರ್ಜೆಗೇರಿಸಲಾಗುವ ಪ್ರದೇಶದ ಜನಸಂಖ್ಯೆ 20,000 ಕ್ಕೆ ಕಡಿಮೆ ಇಲ್ಲದಂತೆ ಹಾಗೂ 50,000 ಕ್ಕೆ ಹೆಚ್ಚಿಲ್ಲದಂತಿರಬೇಕು;<br>• ಅಂತಹ ಪ್ರದೇಶದ ಜನಸಂಖ್ಯೆಯ ಜನಸಾಂದ್ರತೆಯು ಆ ಪ್ರದೇಶದ ಒಂದು ಚದರ ಕಿ.ಮೀ. ವಿಸ್ತೀರ್ಣಕ್ಕೆ 1,500 ಕ್ಕಿಂತ ಕಡಿಮೆ ಇಲ್ಲದಿರುವುದು;<br>• ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂತಹ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಲ್ಲದ ಇತರ ಸಂಪನ್ಮೂಲಗಳಿಂದ |

| | | |
|---|---|---|
| | | ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ಅಥವಾ ವಾರ್ಷಿಕ ತಲಾ ಒಬ್ಬರಿಗೆ 45 ರೂಪಾಯಿಗಳ ದರದಂತೆ ಲೆಕ್ಕಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆ ಇರದ ಹೊರತು;<br>• ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗಾವಕಾಶಗಳ ಶೇಕಡಾವಾರು ಪ್ರಮಾಣವು ಒಟ್ಟು ಉದ್ಯೋಗದ ಪ್ರಮಾಣಕ್ಕಿಂತ 50% ಕ್ಕಿಂತ ಕಡಿಮೆ ಇಲ್ಲದಿರುವುದು.<br><br>ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಪರಿವರ್ತಿಸಲು ಪೌರಾಡಳಿತ ನಿರ್ದೇಶನಾಲಯದಿಂದ ಸ್ವೀಕೃತವಾಗಿರುವ ಈ ಕೆಳಕಂಡ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ:<br>1. ಹಾಸನ ಜಿಲ್ಲೆಯ ಬಾಣಾವರ ಗ್ರಾಮ ಪಂಚಾಯಿತಿ<br>2. ಕೊಪ್ಪಳ ಜಿಲ್ಲೆಯ ಹನುಮಸಾಗರ ಗ್ರಾಮ ಪಂಚಾಯಿತಿ<br>3. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತ್ಯಾಮಗೊಂಡ್ಲು ಗ್ರಾಮ ಪಂಚಾಯಿತಿ<br>4. ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಗ್ರಾಮ ಪಂಚಾಯಿತಿ<br>5. ಬಾಗಲಕೋಟೆ ಜಿಲ್ಲೆಯ ಗುಡೂರು ಎಸ್‌ಸಿ ಗ್ರಾಮ ಪಂಚಾಯಿತಿ<br>6. ಬಾಗಲಕೋಟೆ ಜಿಲ್ಲೆಯ ಕಲಾದಗಿ ಗ್ರಾಮ ಪಂಚಾಯಿತಿ<br>7. ಕೊಡಗು ಜಿಲ್ಲೆಯ ಪೊನ್ನಂಪೇಟೆ ಗ್ರಾಮ ಪಂಚಾಯಿತಿ. |
| ಇ | ಬೆಂಗಳೂರು ತಾಲ್ಲೂಕು ಕೇಂದ್ರದಲ್ಲಿರುವ ಗ್ರಾಮ ಪಂಚಾಯಿತಿಗಳು ಯಾವುವು; ಆಡಳಿತ ಹಿತದೃಷ್ಟಿಯಿಂದ ಅವುಗಳನ್ನು ನಗರ ಸ್ಥಳೀಯ ಸಂಸ್ಥೆಯಾಗಿಸುವ ಉದ್ದೇಶ ಸರ್ಕಾರದ ಮುಂದಿದೆಯೇ; ಇಲ್ಲವಾದಲ್ಲಿ ಕಾರಣಗಳೇನು; | ಬೆಂಗಳೂರು ನಗರ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿದ್ದು, ಒಟ್ಟು 86 ಗ್ರಾಮ ಪಂಚಾಯಿತಿಗಳಿರುತ್ತವೆ. ವಿವರಗಳನ್ನು ಅನುಬಂಧದಲ್ಲಿ ನೀಡಿದೆ.<br>ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳನ್ನಾಗಿ ಮೇಲ್ದರ್ಜೆಗೇರಿಸಲು ಜಿಲ್ಲಾಧಿಕಾರಿಯವರಿಂದ ಸೂಕ್ತ ಪ್ರಸ್ತಾವನೆಯು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಸಲ್ಲಿಸಲ್ಪಟ್ಟು, ಅವರಿಂದ ಅರ್ಹವಾದ ಪ್ರಸ್ತಾವನೆಯು ಸರ್ಕಾರದಲ್ಲಿ ಸ್ವೀಕೃತವಾದಲ್ಲಿ ನಿಯಾಮನುಸಾರ ಪರಿಶೀಲಿಸಿ ಕ್ರಮವಹಿಸಲಾಗುತ್ತದೆ. |

**ಸಂಖ್ಯೆ:ನಅಇ 40 ಎಲ್‌ಸಿಕ್ಯೂ 2022.**

(ಎನ್. ನಾಗರಾಜು (ಎಂ.ಟಿ.ಬಿ))

**ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ**

**ಸಾರ್ವಜನಿಕ ಉದ್ದಿಮೆಗಳ ಸಚಿವರು**

# ಅನುಬಂಧ

| ಬೆಂಗಳೂರು ದಕ್ಷಿಣ ತಾಲ್ಲೂಕು | | ಬೆಂಗಳೂರು ಯಲಹಂಕ ತಾಲ್ಲೂಕು | | ಬೆಂಗಳೂರು ಉತ್ತರ ತಾಲ್ಲೂಕು | |
|---|---|---|---|---|---|
| ಕ್ರ.ಸಂ. | ಪಂಚಾಯಿತಿಗಳು | ಕ್ರ.ಸಂ | ಪಂಚಾಯಿತಿಗಳು | ಕ್ರ.ಸಂ. | ಪಂಚಾಯಿತಿಗಳು |
| 1. | ಅಗರ | 1. | ಅರಕೆರೆ | 1. | ಆಲೂರು |
| 2. | ಅಜ್ಜನಹಳ್ಳಿ | 2. | ಬಾಗಲೂರು | 2. | ಅಡಕಮಾರನಹಳ್ಳಿ |
| 3. | ಚನ್ನೇನಹಳ್ಳಿ | 3. | ಬಂಡೀಕೊಡಿಗೆ ಹಳ್ಳಿ | 3. | ದಾಸನಪುರ |
| 4. | ಚಿಕ್ಕನಹಳ್ಳಿ | 4. | ಬೆಟ್ಟಹಲಸೂರು | 4. | ಗೋಪಾಲಪುರ |
| 5. | ಚೋಳನಾಯಕನ ಹಳ್ಳಿ | 5. | ಚಿಕ್ಕಜಾಲ | 5. | ಹೂಸ್ಕೂರು |
| 6. | ಚುಂಚನ ಕುಪ್ಪೆ | 6. | ದೊಡ್ಡಜಾಲ | 6. | ಕಾಚೋಹಳ್ಳಿ |
| 7. | ದೊಡ್ಡತೋಗುರು | 7. | ಗಂಟೀಗಾನಗಳ್ಳಿ | 7. | ಕಡಬಗೆರೆ |
| 8. | ಹೆಚ್.ಗೊಲ್ಲಹಳ್ಳಿ | 8. | ಹೆಸರುಘಟ್ಟ | 8. | ಕಿತ್ತನಹಳ್ಳಿ |
| 9. | ಕೆ. ಗೊಲ್ಲಹಳ್ಳಿ | 9. | ಹುರಳಿಚಿಕ್ಕನಹಳ್ಳಿ | 9. | ಕೊಡಿಗೆಹಳ್ಳಿ |
| 10. | ಕಗ್ಗಲೀಪುರ | 10. | ಕಾಸಘಟ್ಟಪುರ | 10. | ಮಾಚೋಹಳ್ಳಿ |
| 11. | ಕೋನಪ್ಪನ ಅಗ್ರಹಾರ | 11. | ಮರೆನಾಹಳ್ಳಿ | 11. | ಸೊಂಡೆಕೊಪ್ಪ |
| 12. | ಕುಂಬಳಗೋಡು | 12. | ಮೀನುಕುಂಟೆ | | |
| 13. | ನೆಲಗುಳಿ | 13. | ರಾಜಾನುಕಂಟೆ | | |
| 14. | ರಾಮೋಹಳ್ಳಿ | 14. | ಸಾತನೂರು | | |
| 15. | ಸೋಮನಹಳ್ಳಿ | 15. | ಶಿವಕೋಟೆ | | |
| 16. | ಸೂಲಿಕೆರೆ | 16. | ಸಿಂಗನಾಯಕನ ಹಳ್ಳಿ | | |
| 17. | ತರಳು | 17. | ಸೋನ್ನೆನಹಳ್ಳಿ | | |
| 18. | ತಾವರಕೆರೆ | 18. | ವಡೆರಾಹಳ್ಳಿ | | |

| ಬೆಂಗಳೂರು ಆನೇಕಲ್ ತಾಲ್ಲೂಕು | | | | ಬೆಂಗಳೂರು ಪೂರ್ವ ತಾಲ್ಲೂಕು | |
|---|---|---|---|---|---|
| ಕ್ರಸಂ | ಪಂಚಾಯಿತಿಗಳು | ಕ್ರಸಂ | ಪಂಚಾಯಿತಿಗಳು | ಕ್ರಸಂ | ಪಂಚಾಯಿತಿಗಳು |
| 1. | ಬಳ್ಳೂರು | 17. | ಮಾಯಸಂದ್ರ | 1. | ಆವಲಹಳ್ಳಿ |
| 2. | ಭನ್ನೇರುಘಟ್ಟ | 18. | ಮುಗುಳೂರು | 2. | ಬಿದರಹಳ್ಳಿ |
| 3. | ಬಿದರಗುಪ್ಪೆ | 19. | ಮುತ್ತಾನಲ್ಲೂರು | 3. | ದೊಡ್ಡಬನಹಳ್ಳಿ |
| 4. | ಬಿಲ್ಲಾಪುರ | 20. | ನೆರಳೂರು | 4. | ದೊಡ್ಡಗುಬ್ಬಿ |
| 5. | ಬ್ಯಾಗಡದೇನಹಳ್ಳಿ | 21. | ನೆರಿಗ | 5. | ಹಾಲನಾಯಕನಹಳ್ಳಿ |
| 6. | ದೊಮ್ಮಸಂದ್ರ | 22. | ರಾಗಿಹಳ್ಳಿ | 6. | ಕನ್ನಮಂಗಲ |
| 7. | ಹಂದೇನಹಳ್ಳಿ | 23. | ಸಮಡೂಂರು | 7. | ಕಣ್ಣೂರು |
| 8. | ಹಾರಗದ್ದೆ | 24. | ಸರ್ಜಾಪುರ | 8. | ಕಿತ್ತಗನೂರು |
| 9. | ಹೆನ್ನಾಗರ | 25. | ಶಾಂತಿಪುರ | 9. | ಕೊಡತಿ |
| 10. | ಹುಲಿಮಂಗಲ | 26. | ಸುರಗಜಕ್ಕನಹಳ್ಳಿ | 10. | ಮಂಡೂರು |
| 11. | ಹೂಸ್ಕೂರು | 27. | ವನಕನಹಳ್ಳಿ | 11. | ಶೀಗೇಹಳ್ಳಿ |
| 12. | ಇಂಡ್ಲವಾಡಿ | 28. | ಯಮರೆ | | |
| 13. | ಕಲ್ಲುಬಾಳು | | | | |
| 14. | ಕರ್ಪೂರ | | | | |
| 15. | ಮಂಟಪ | | | | |
| 16. | ಮರಸೂರು | | | | |

ಕೋನಪ್ಪನ ಅಗ್ರಹಾರ ಗ್ರಾಮ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೇರಿಸಿರುವ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠ ಇಲ್ಲಿ ತಡೆಯಾಜ್ಞೆ ಇರುತ್ತದೆ. ದೊಡ್ಡತೋಗೂರು ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿರುವ ಅಧಿಸೂಚನೆಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಪೀಠ ಇಲ್ಲಿ ತಡೆಯಾಜ್ಞೆ ಇದ್ದು, ಪ್ರಸ್ತುತ, ಪ್ರಕರಣವು ಇತ್ಯರ್ಥಗೊಂಡಿದ್ದು, ಮುಂದಿನ ಕ್ರಮವಹಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.